# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 31.03.2026 ರಂದು ಪೂರ್ವಾಹ್ನ ಗಂಟೆ 11.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ರಾಣಿ ಅಬ್ಬಕ್ಕ ಸಭಾಂಗಣದಲ್ಲಿ ನಡೆದ ಶೈಕ್ಷಣಿಕ ಮಂಡಳಿಯ 2025-26ನೇ ಸಾಲಿನ ಚತುರ್ಥ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು**

**ಅನುಪಸ್ಥಿತರು**

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು, ಭಾಗವಹಿಸಿರುವ ಎಲ್ಲಾ ಸದಸ್ಯರುಗಳನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಸಭೆಯಲ್ಲಿ ಹಾಜರಿರುವ ಎಲ್ಲಾ ಅಧಿಕಾರಿಗಳನ್ನು ಹಾಗೂ ಆಡಳಿತ ಸಿಬ್ಬಂದಿಯನ್ನು ಸಭೆಗೆ ಸ್ವಾಗತಿಸಿ, ಸಭಾಧ್ಯಕ್ಷರಲ್ಲಿ ಸಭೆಯನ್ನು ಮುಂದುವರಿಸುವಂತೆ ಕೋರಿದರು. ಮಾನ್ಯ ಕುಲಪತಿಯವರು ಮತ್ತೊಮ್ಮೆ ಎಲ್ಲರನ್ನೂ ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

## ಪ್ರಾಸ್ತಾವಿಕ

ಈ ಕೆಳಕಂಡ ವಿಷಯಗಳನ್ನು ಸಭೆಯ ಗಮನಕ್ಕೆ ತರಲಾಯಿತು.

- ದಿನಾಂಕ 28.03.2026 ರಂದು ಮಂಗಳೂರು ವಿಶ್ವವಿದ್ಯಾನಿಲಯದ 44ನೇ ವಾರ್ಷಿಕ ಘಟಿಕೋತ್ಸವವು ಯಶಸ್ವಿಯಾಗಿ ಜರುಗಿದ ಬಗ್ಗೆ ಮಾನ್ಯ ಕುಲಪತಿಯವರು ಹರ್ಷ ವ್ಯಕ್ತಪಡಿಸಿ, ಘಟಿಕೋತ್ಸವ ಕಾರ್ಯಕ್ರಮದ ಯಶಸ್ಸಿಗೆ ಸಹಕಾರ ನೀಡಿದ ಶೈಕ್ಷಣಿಕ ಮಂಡಳಿ ಸದಸ್ಯರುಗಳಿಗೆ ಕೃತಜ್ಞತೆಯನ್ನು ಸಲ್ಲಿಸಿದರು. ಅಂತೆಯೇ ಘಟಿಕೋತ್ಸವ ಕಾರ್ಯಕ್ರಮದ ಯಶಸ್ಸಿಗಾಗಿ ಅಹೋರಾತ್ರಿ ದುಡಿದ ಎಲ್ಲಾ ಅಧಿಕಾರಿಗಳಿಗೆ, ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಗಳಿಗೆ ಮತ್ತು ಘಟಿಕೋತ್ಸವದ ಕಾರ್ಯಕ್ರಮದ ಬಗ್ಗೆ ವರದಿ ಮಾಡಿದ ಎಲ್ಲಾ ಮಾಧ್ಯಮ ಮಿತ್ರರಿಗೂ ಕೃತಜ್ಞತೆ ಸಲ್ಲಿಸಿದರು.

**I. ದಿನಾಂಕ 17.01.2026 ರಂದು ನಡೆದ ಶೈಕ್ಷಣಿಕ ಮಂಡಳಿಯ 2025-26ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಡವಳಿಯ ದೃಢೀಕರಣ.**

-ದೃಢೀಕರಿಸಲಾಯಿತು.-

**II. ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಗೊಂಡ ವಿನಿಯಮಗಳು /ಪರಿನಿಯಮಗಳು**

**Statute Governing the cadre and recruitment rules for the post of Senior Assistant in Mangalore University – Reg.**

-ಅವಗಾಹಿಸಲಾಯಿತು-

**III. ಕುಲಪತಿಗಳು, ಸಿಂಡಿಕೇಟು, ನಿಕಾಯಗಳು ಮತ್ತು ಅಧ್ಯಯನ ಮಂಡಳಿಗಳಿಂದ ಬಂದ ಪ್ರಸ್ತಾವನೆಗಳು:**

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಿಡಿಸಿ:ಶೈ.ಮ.ಸಾ.ಸ. 4:1(2025-26) |
| **ವಿಷಯ:** | ಶೈಕ್ಷಣಿಕ ವರ್ಷ 2026-27ನೇ ಸಾಲಿಗೆ ಪ್ರೆಸ್ಟೀಜ್ ಸ್ಕೂಲ್ ಆಫ್ ಮ್ಯಾನೇಜ್ಮೆಂಟ್ ಅಂಡ್ ಇನ್ನೋವೇಶನ್, ಜಪ್ಪಿನಮೊಗರು, ಮಂಗಳೂರು ಎಂಬ ವಿದ್ಯಾಸಂಸ್ಥೆಗೆ ಹೊಸ ಸಂಯೋಜನೆ ನೀಡುವ ಬಗ್ಗೆ. |
| **ನಿರ್ಣಯ:** | ಘಟನೋತ್ತರವಾಗಿ ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಸಿಡಿಸಿ:ಶೈ.ಮ.ಸಾ.ಸ.4:2 (2025-26) |
| **ವಿಷಯ:** | ಮಂಗಳೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿದ್ದ ಡಾ.ಎ.ವಿ.ಬಾಳಿಗ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಅಂಡ್ ರೂರಲ್ ಮ್ಯಾನೇಜ್ಮೆಂಟ್, ಹಾರಾಡಿ ವಿದ್ಯಾಸಂಸ್ಥೆಯನ್ನು ಅಧಿಕೃತವಾಗಿ ಮುಚ್ಚುವ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | ಎಸಿಸಿ:ಶೈ.ಮ.ಸಾ.ಸ.4:3 (2025-26) |
| **ವಿಷಯ:** | ಸ್ನಾತಕೋತ್ತರ ಕಾರ್ಯಕ್ರಮಗಳನ್ನು ನಿಯಂತ್ರಿಸುವ ವಿನಿಯಮಕ್ಕೆ ತಿದ್ದುಪಡಿ - ಅನುಮೋದನೆ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |

**ಕಾರ್ಯಸೂಚಿ ಸಂಖ್ಯೆ:** ಎಸಿಸಿ:ಶೈ.ಮ.ಸಾ.ಸ.4:4 (2025-26)

**ವಿಷಯ:** ರಾಜ್ಯ ಶಿಕ್ಷಣ ನೀತಿ ಆಯೋಗದ ಮಾರ್ಗಸೂಚಿ ಪ್ರಕಾರ ತಯಾರಿಸಿರುವ ನಾಲ್ಕನೇ ಸೆಮಿಸ್ಟರ್‌ನ ಬಿ.ಎಸ್ಸಿ. ಪದವಿ ಕಾರ್ಯಕ್ರಮದ ಸಂಖ್ಯಾಶಾಸ್ತ್ರ ಕೋರ್ಸಿಗೆ ಸಂಬಂಧಿಸಿದ ಎಲೆಕ್ಟಿವ್ ಕೋರ್ಸಿನ ಪಠ್ಯಕ್ರಮದ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಹಣಕಾಸು:ಶೈ.ಮ.ಸಾ.ಸ.4:5 (2025-26)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2026-27ನೇ ಸಾಲಿನ ಆಯವ್ಯಯ ಅಂದಾಜುಗಳು ಮತ್ತು 2025-26ನೇ ಸಾಲಿನ ಪರಿಷ್ಕೃತ ಆಯವ್ಯ ಯ ಅಂದಾಜುಗಳ ಅನುಮೋದನೆ ಬಗ್ಗೆ.

**ನಿರ್ಣಯ:** ವಿಸ್ತೃತವಾಗಿ ಚರ್ಚೆ ನಡೆಸಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ:ಶೈ.ಮ.ಸಾ.ಸ.4:6 (2025-26)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ವಾರ್ಷಿಕ ವರದಿಯ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಇತರ ವಿಷಯಗಳು:**

ಮಂಗಳೂರು ವಿಶ್ವವಿದ್ಯಾನಿಲಯದ 44ನೇ ವಾರ್ಷಿಕ ಘಟಿಕೋತ್ಸವವು ಅತ್ಯಂತ ವ್ಯವಸ್ಥಿತವಾಗಿ ಹಾಗೂ ಅಚ್ಚುಕಟ್ಟಾಗಿ ನಡೆಸಿದ ಬಗ್ಗೆ ಶೈಕ್ಷಣಿಕ ಮಂಡಳಿ ಸದಸ್ಯರ ಹಾಗೂ ಪ್ರಾಂಶುಪಾಲರ ಸಂಘದ ಪರವಾಗಿ ಶೈಕ್ಷಣಿಕ ಮಂಡಳಿ ಸದಸ್ಯರಾದ ಡಾ. ವಿನ್ಸೆಂಟ್ ಆಳ್ವ , ಪ್ರಾಂಶುಪಾಲರು, ಮಿಲಾಗ್ರಿಸ್ ಕಾಲೇಜು, ಕಲ್ಯಾಣಪುರ ಇವರು ಅಭಿನಂದನೆ ಸಲ್ಲಿಸಿದರು.

ಕೊನೆಯದಾಗಿ, ಕುಲಸಚಿವರು ಸದಸ್ಯರುಗಳ ಸಲಹೆ ಸಹಕಾರಗಳಿಗೆ ಹಾಗೂ ಭಾಗವಹಿಸಿದ ಮಾಧ್ಯಮ ಪ್ರತಿನಿಧಿಗಳು ಸೇರಿದಂತೆ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿ , ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| **ಸಹಿ/-** | **ಸಹಿ/-** |
| **ಕುಲಸಚಿವರು** | **ಕುಲಪತಿಗಳು.** |